# ನಡಾವಳಿ ಮತ್ತು ನೈತಿಕತೆ ನೀತಿ ಲಂಚ & ಅಸಮರ್ಪಕ ಪಾವತಿಗಳ ಮೇಲಿನ ನೀತಿ

ETHICS & LEGAL COMPLIANCE | ISSUED: June 1, 2014 – REVISED: June 16, 2021

ಮ್ಯಾಗ್ನ ಪ್ರತಿ ದೇಶದಲ್ಲು ತನ್ನೆಲ್ಲಾ ವ್ಯಾಪಾರ ವ್ಯವಹಾರಗಳಲ್ಲಿ ಲಂಚ ಮತ್ತು ಅಸಮರ್ಪಕ ಪಾವತಿಗಳನ್ನು ನಿಷೇಧಿಸುತ್ತದೆ. ಈ ನೀತಿ Magna International Inc. ಮತ್ತು ಅದರ ಎಲ್ಲಾ ಕಾರ್ಯಾಚರಣಾ ಗುಂಪು, ವಿಭಾಗ, ಜಂಟಿ ಉದ್ದಿಮೆಗಳಿಗೆ ಮತ್ತು ಜಾಗತಿಕವಾದ ಇತರ ಕಾರ್ಯಾಚರಣೆಗಳಿಗೆ (ಒಟ್ಟಾರೆಯಾಗಿ "Magna"ಗೆ) ಅನ್ವಯಿಸುತ್ತದೆ. ಮ್ಯಾಗ್ನ ಪರವಾಗಿ ಕೆಲಸ ಮಾಡುವ ಉದ್ಯೋಗಿ, ಅಧಿಕಾರಿ, ನಿರ್ದೇಶಕ, ಸಲಹೆಗಾರ ಮತ್ತು ಏಜೆಂಟರು ಸೇರಿದಂತೆ ಎಲ್ಲಾ ವ್ಯಕ್ತಿಗಳಿಗು ಈ ನೀತಿ ಅನ್ವಯ ಆಗುತ್ತದೆ.

ಮ್ಯಾಗ್ನ "ಉತ್ತಮ ಬೆಲೆಗೆ ಉತ್ತಮ ಉತ್ಪನ್ನ"ದ ಆಧಾರದಲ್ಲಿ ವ್ಯಾಪಾರವನ್ನು ಮುನ್ನೆಡೆಸುವ ಖ್ಯಾತಿಯನ್ನು ಹೊಂದಲು ವರ್ಷಗಳನ್ನು ಸವೆಸಿದೆ. ವ್ಯಾಪಾರವನ್ನು ಪ್ರಾಮಾಣಿಕತೆ ಇಂದ ಮಾಡುವ ಜೊತೆಗೆ, ಉತ್ಪನ್ನ ಮತ್ತು ಬೆಲೆಯ ಆಧಾರದಲ್ಲಿ ನ್ಯಾಯಯುತವಾಗಿ ಗೆಲ್ಲಬೇಕು. ಕೊಡುಗೆ, ಪಾವತಿ ಅಥವಾ ಲಂಚಗಳ ಮತ್ತು ಇತರ ಅಸಮರ್ಪಕ ಪಾವತಿಗಳ ಸ್ವೀಕಾರದಿಂದಲ್ಲ ಎನ್ನುವುದು ಇದರ ಅರ್ಥವಾಗಿದೆ. ಮ್ಯಾಗ್ನದ ನಡಾವಳಿ ಮತ್ತು ನೈತಿಕತೆ ನೀತಿ ಲಂಚ ಮತ್ತು ಇತರ ಅಸಮರ್ಪಕ ಪಾವತಿಗಳನ್ನು ಸ್ಪಷ್ಟವಾಗಿ ನಿಷೇಧಿಸುತ್ತದೆ. ಅಂತಹ ಚಟುವಟಿಕೆಗಳಲ್ಲಿ ಭಾಗವಹಿಸುವ ಯಾವುದೇ ಉದ್ಯೋಗಿ ಅಥವಾ ಮ್ಯಗ್ನಾ ಪರವಾಗಿ ಕೆಲಸ ಮಾಡುವ ಇತರ ವ್ಯಕ್ತಿಯ ಮೇಲೆ ಶಿಸ್ತು ಕ್ರಮವನ್ನು ಜರುಗಿಸಿ, ಉದ್ಯೋಗದಿಂದ ವಜಾ ಮಾಡುವ ಜೊತೆಗೆ ಇತರ ಗುತ್ತಿಗೆ ಒಪ್ಪಂದವನ್ನು ಮುಕ್ತಾಯಗೊಳಿಸಬಹುದಾಗಿದೆ. ಅಷ್ಟೆ ಅಲ್ಲದೆ ಅವರ ಮೇಲೆ ಕ್ರಿಮಿನಲ್ ಮೊಕದ್ದಮೆಯನ್ನು ದಾಖಲಿಸಬಹುದಾಗಿದೆ.

ಇನ್ನೊಂದು ದೇಶದಲ್ಲಿ ನಡೆದಿದ್ದರೂ ಅನೇಕ ದೇಶಗಳು ಲಂಚ ಮತ್ತು ಇತರ ಅಸಮರ್ಪಕ ಪಾವತಿಗಳನ್ನು ಕಾನೂನುಬಾಹಿರವೆಂದು ಪರಿಗಣಿಸುವ ಕಾನೂನುಗಳನ್ನು ಹೊಂದಿವೆ. ಈ ಕಾನೂನುಗಳ ಉಲ್ಲಂಘನೆ ಗಂಭೀರ ಅಪರಾಧವಾಗಿದ್ದು, ಕಂಪನಿ ಮತ್ತು ಯಾವುದೇ ಉದ್ಯೋಗಿ ಅಥವಾ ಭಾಗಿಯಾದ ಇತರರಿಗೆ (ಅಂತಹ ನಡವಳಿಕೆಯನ್ನು ಅಧಿಕೃತಗೊಳಿಸಿದ ವ್ಯವಸ್ಥಾಪಕರು ಸೇರಿದಂತೆ) ದಂಡ ವಿಧಿಸಬಹುದಾಗಿದೆ. ನೇರವಾಗಿ ಭಾಗಿಯಾದ ವ್ಯಕ್ತಿಗಳು ಜೈಲು ಪಾಲಾಗುವ ಅಪಾಯವಿದೆ. ಈ ಕಾನೂನುಗಳ ಉಲ್ಲಂಘನೆ ಬಗೆಗಿನ ಸಣ್ಣ ಅಂಶವೂ ಕೂಡ ಮ್ಯಾಗ್ನದ ಖ್ಯಾತಿಯ ಮೇಲೆ ಗಂಭೀರವಾದ ಪ್ರಭಾವ ಬೀರಬಹುದು.

## "ಅಸಮರ್ಪಕ ಪಾವತಿ" ಎಂದರೇನು?

**"ಅಸಮರ್ಪಕ ಪಾವತಿ"** ಲಂಚ, ಕಿಕ್‌ಬ್ಯಾಕ್ ಅಥವಾ ಅನುಕೂಲ ಮಾಡಿಕೊಟ್ಟ ಪಾವತಿಯನ್ನು ಒಳಗೊಂಡಿರಬಹುದು.

"**ಲಂಚ**" (ಅಥವಾ "**ಲಂಚ ನೀಡುವಿಕೆ**") ಅಂದರೆ ಮೌಲ್ಯ ಹೊಂದಿರುವ ಯಾವುದಾದರೂ - ಹಣ, ಉಡುಗೊರೆ, ನೆರವು, ರಿಯಾಯಿತಿ, ಮನರಂಜನೆ, ಪ್ರಯೋಜನ ಅಥವಾ ಯಾವುದೇ ರೀತಿಯ ಉಪಯೋಗ ಸೇರಿರುವಂತವು - ವೈಯಕ್ತಿಕ ಪ್ರಯೋಜನಕ್ಕಾಗಿ ವ್ಯಕ್ತಿಯ ಮೂಲಕ, ಅವರು ಪ್ರತಿನಿಧಿಸುವ ಸಂಸ್ಥೆಯ ಪರವಾಗಿ ಇವನ್ನು ಯಾರಿಗಾದರೂ ನೀಡಲಾಗಿರಬಹುದು ಅಥವಾ ಆ ವ್ಯಕ್ತಿ ಮಾಡಬೇಕಾದ ಕೆಲಸ ಅಥವಾ ತೆಗೆದುಕೊಳ್ಳಬೇಕಾದ ನಿರ್ಧಾರದ ಮೇಲೆ ಪ್ರಭಾವ ಬೀರಿ, ಅದರಿಂದ ಮ್ಯಾಗ್ನಗೆ ಲಾಭ ಅಥವಾ ಅನುಕೂಲವನ್ನು ಮಾಡಿಕೊಡುವ ಪ್ರಯತ್ನ ಆಗಿರಬಹುದು. ಉದಾಹರಣೆ ಈ ಕೆಳಗಿನವುಗಳನ್ನು ಒಳಗೊಂಡಿರಬಹುದು - (i) ಗ್ರಾಹಕರೊಬ್ಬರಿಗೆ ಸಂಬಂಧಪಟ್ಟ ಖರೀದಿ ಉದ್ಯೋಗಿಗೆ ಆ ಗ್ರಾಹಕರಿಂದ ಆಗುವ ವ್ಯಾಪಾರವನ್ನು (ಅಥವಾ ನಿಯಮ ಅಥವಾ ನಡೆಸಿಕೊಳ್ಳುವ ರೀತಿಯನ್ನು ಅನುಕೂಲಕರವಾಗಿಸಿಕೊಳ್ಳಲು) ಭದ್ರಪಡಿಸುವ

ಸಲುವಾಗಿ ಹಣ ಕೊಡುವುದು, ಅಥವಾ (ii) ಮ್ಯಾಗ್ನಗೆ ಅನುಕೂಲ ಮಾಡಿಕೊಡಲು, ಅದರ ಬದಲಾಗಿ ಸರ್ಕಾರಿ ಅಧಿಕಾರಿಗೆ ಉಡುಗೊರೆಗಳನ್ನು ನೀಡುವುದು.

"**ಕಿಕ್‌ಬ್ಯಾಕ್**" ಒಂದು ರೀತಿಯ ಲಂಚವಾಗಿದೆ. ಇದು ವ್ಯವಹಾರ ಸಂಬಂಧಿ ವ್ಯವಸ್ಥೆಗಳನ್ನು ಮಾಡಲು ಅಥವಾ ಪೋಷಿಸಲು ವೈಯಕ್ತಿಕವಾಗಿ ಈಗಾಗಲೇ ಪಾವತಿಸಿದ (ಅಥವಾ ಪಾವತಿಸಬೇಕಾದ) ನೀಡುವ ಅಥವಾ ಸ್ವೀಕರಿಸುವ ಬಹುಮಾನದ ಮೊತ್ತವಾಗಿದೆ. ಉದಾಹರಣೆ ಈ ಕೆಳಗಿನವುಗಳನ್ನು ಒಳಗೊಂಡಿದೆ - (i) ಮ್ಯಾಗ್ನ ಉದ್ಯೋಗಿಯನ್ನು ಉತ್ತೇಜಿಸಲು ಮ್ಯಾಗ್ನ ಉದ್ಯೋಗಿಗೆ ಪೂರೈಕೆದಾರರೊಬ್ಬರು ನಿರ್ವಹಿಸದ ಸೇವೆಗಳಿಗೆ ಇನ್‌ವಾಯ್ಸ್‌ಗಳನ್ನು ಪ್ರೊಸೆಸ್ ಮಾಡಲು ನೀಡುವ ಹಣ, ಅಥವಾ (ii) ಗ್ರಾಹಕರೊಬ್ಬರ ಸಿಬ್ಬಂದಿಗೆ ಮ್ಯಾಗ್ನಗೆ ಒಪ್ಪಂದ ಸಿಗುವಂತೆ ಮಾಡಿದರೆ ಅಥವಾ ಕೊಟ್ಟರೆ, ಒಪ್ಪಂದದ ಮೌಲ್ಯದ ಶೇಕಡಾವಾರು ಮೊತ್ತವನ್ನು ಪಾವತಿಸುವ ಆಮೀಷ ಒಡ್ಡುವುದು.

"**ಅನುಕೂಲ ಮಾಡಿಕೊಟ್ಟ ಪಾವತಿ**" ಎಂದರೆ ಸರ್ಕಾರಿ ಅಧಿಕಾರಿಗಳಿಗೆ ಕೊಡುವ ಒಂದು ರೀತಿಯ ಲಂಚವಾಗಿದ್ದು, ಇದು ಅನೇಕ ದೇಶಗಳಲ್ಲಿ ಕಾನೂನುಬಾಹಿರವಾಗಿದೆ. ಸಾಮಾನ್ಯವಾಗಿ, ಅವು ಮ್ಯಾಗ್ನ ಕಾನೂನುಬದ್ಧವಾಗಿ ಬಾಧ್ಯತೆ ಹೊಂದಿರುವ ಸಾಮಾನ್ಯ ಸೇವೆ ಅಥವಾ ಮಂಜೂರಾತಿಗಳನ್ನು ಮಾಡಿಸಲು ಕೆಳಹಂತದ ಸರ್ಕಾರಿ ಅಧಿಕಾರಿಗಳಿಗೆ ಕೊಡುವ ಒಂದು ರೀತಿಯ ಲಂಚವಾಗಿವೆ (ಕೆಲವೊಮ್ಮೆ ಸೇವೆಯ ವೇಗ ಹೆಚ್ಚಿಸುವ ಕಾರಣಕ್ಕೆ). ದೂರವಾಣಿ ಅಥವಾ ಬೇಕಾದ ಸಂಪರ್ಕವನ್ನು ಪಡೆಯಲು ಅಥವಾ ಕಸ್ಟಮ್ಸ್ ಘೋಷಣೆ ಪ್ರಕ್ರಿಯೆ ವೇಗ ಹೆಚ್ಚಿಸುವ ಸಲುವಾಗಿ ಮಾಡಿದ ಪಾವತಿಗಳು ಉದಾಹರಣೆಗಳಾಗಿವೆ.

## ಅಸಮರ್ಪಕ ಪಾವತಿಗಳ ಕುರಿತಾದ ಮ್ಯಾಗ್ನ ನೀತಿ

ಮ್ಯಾಗ್ನ ನೇರವಾಗಿ ಅಥವಾ ಪರೋಕ್ಷವಾಗಿ (ಮೂರನೇ ವ್ಯಕ್ತಿಯ ಮೂಲಕ), ಅವರು ಮ್ಯಾಗ್ನ ಇಂದ ಅಥವಾ ಅದರ ಉದ್ಯೋಗಿ ಇಂದ (ಅವರ ಜೇಬಿನಿಂದ) ಪಾವತಿ ಪಡೆಯುತ್ತಾ ಇದ್ದಾರೆಯೆ ಎಂಬುದನ್ನು ಪರಿಗಣನೆಗೆ ತೆಗೆದುಕೊಳ್ಳದೆ, ಅಸಮರ್ಪಕ ಪಾವತಿಗಳನ್ನು ನೀಡುವುದನ್ನು ಅಥವಾ ಮಾಡುವುದನ್ನು ನಿಷೇಧಿಸುತ್ತದೆ. ಯಾವುದೇ ಅಸಮರ್ಪಕ ಪಾವತಿಯ ಕುರಿತಾದ ಸುಳ್ಳು ದಾಖಲಾತಿ ಅಥವಾ ಪುರಾವೆಗಳನ್ನು ಸೃಷ್ಟಿಸುವುದನ್ನು ಮ್ಯಾಗ್ನ ನಿಷೇಧಿಸುತ್ತದೆ ಹಾಗೂ ಮ್ಯಾಗ್ನ ಪರವಾಗಿ ಕಾರ್ಯನಿರ್ವಹಿಸುವ ಉದ್ಯೋಗಿ ಮತ್ತು ಮೂರನೇ ವ್ಯಕ್ತಿಗಳು ಯಾವುದೇ ಅಸಮರ್ಪಕ ಪಾವತಿಯನ್ನು ಪಡೆಯುವುದನ್ನು ಅಥವಾ ಸ್ವೀಕರಿಸುವುದನ್ನು ನಿಷೇಧಿಸುತ್ತದೆ (ಉದಾಹರಣೆಗೆ, ಮ್ಯಾಗ್ನಗೆ ಸರಬರಾಜು ಮಾಡುವವರಿಂದ ಅಥವಾ ಮ್ಯಾಗ್ನ ಉದ್ಯೋಗಿ ಇಂದ).

ಅಸಮರ್ಪಕ ಪಾವತಿ ಎಂದಿಗೂ ಮಾಡದಿದ್ದರೂ, ಪಾವತಿ ಮಾಡುವುದಾಗಿ ಒಡ್ಡಿದ ಆಮಿಷ ಅಥವಾ ನೀಡಿದ ಭರವಸೆ ಕಾನೂನುಬಾಹಿರವಾಗಿರಬಹುದು.

ಕೆಲವು ಸಂದರ್ಭಗಳಲ್ಲಿ, ವ್ಯಾಪಾರವನ್ನು ಪಡೆಯಲು ಅಥವಾ ನಿರ್ವಹಿಸಲು ನೀಡಿದ ಉಡುಗೊರೆ ಅಥವಾ ಮಾಡಲಾದ ಮನರಂಜನ ವೆಚ್ಚಗಳನ್ನು, ವಿಶೇಷವಾಗಿ, ಉಡುಗೊರೆ ಮೌಲ್ಯವು ದೊಡ್ಡದ್ದಾಗಿದ್ದರೆ ಅಥವಾ ಮನರಂಜನೆ ಅಧಿಕವಾಗಿದ್ದರೆ ಅದನ್ನು ಲಂಚವೆಂದು ಪರಿಗಣಿಸಬಹುದು (ಉದಾಹರಣೆಗೆ, ಪ್ರಯಾಣ ವೆಚ್ಚಗಳು). ಉಡುಗೊರೆ ಮತ್ತು ಮನರಂಜನೆ ಮತ್ತು ಲಂಚದ ನಡುವಿನ ವ್ಯತ್ಯಾಸದ ಬಗೆಗಿನ ಉತ್ತಮ ತಿಳುವಳಿಕೆಗಾಗಿ ಮ್ಯಾಗ್ನದ ಉಡುಗೊರೆ ಮತ್ತು ಮನರಂಜನೆ ನೀತಿ ಅನ್ನು ನೋಡಿ. ಉಡುಗೊರೆ ಸೂಕ್ತವೇ ಅಥವಾ ಅಲ್ಲವೇ ಎನ್ನುವುದರ ಕುರಿತು ನಿಮಗೆ ಪ್ರಶ್ನೆಗಳಿದ್ದರೆ, ನಿಮ್ಮ ಪ್ರಾದೇಶಿಕ ಅಥವಾ ಗುಂಪು ಕಾನೂನು ಸಲಹೆಗಾರರನ್ನು ಅಥವಾ ಪ್ರಾದೇಶಿಕ ಅನುಸರಣೆ ಅಧಿಕಾರಿಯನ್ನು ನೀವು ಸಂಪರ್ಕಿಸಬೇಕು. ಅನುಸರಣೆ ನಿಯಂತ್ರಣ ಕಾರ್ಯವಿಧಾನ - ಸರ್ಕಾರಿ ಅಧಿಕಾರಿಗಳ ಮೇಲಿನ ವೆಚ್ಚಗಳು, ಇದರ ಅನುಗುಣವಾಗಿ, ಸರ್ಕಾರಿ ಅಧಿಕಾರಿಯ ಪರವಾಗಿ ಮಾಡಿದ ಯಾವುದೇ ಉಡುಗೊರೆ ಅಥವಾ ಮನರಂಜನ ವೆಚ್ಚಗಳನ್ನು ಮುಂಚಿತವಾಗಿ ಅನುಮೋದಿಸಬೇಕು.

## ಅಂತರಾಷ್ಟ್ರೀಯವಾಗಿ ಪಾಲಿಸಲಾಗುವ ಲಂಚ-ವಿರೋಧಿ ಕಾನೂನುಗಳು

ಮ್ಯಾಗ್ನ ಅನೇಕ ಸ್ಥಳೀಯ ಮತ್ತು ಅಂತರಾಷ್ಟ್ರೀಯ ಲಂಚ-ವಿರೋಧಿ ಕಾನೂನುಗಳಿಗೆ ಒಳಪಟ್ಟಿರುತ್ತದೆ. ಇಲ್ಲಿನ ಕೆಲವು ಕಾನೂನುಗಳು ನಿರ್ದಿಷ್ಟವಾಗಿ ವಿದೇಶಿ ಸರ್ಕಾರಿ ಅಧಿಕಾರಿಗಳ ಲಂಚವನ್ನು ಗುರಿಯಾಗಿಸಿಕೊಂಡಿವೆ. ಉದಾಹರಣೆಗೆ, ಇದರಲ್ಲಿ ಯುನೈಟೆಡ್ ಸ್ಟೇಟ್ಸ್‌ನ ಫಾರಿನ್ ಕರಪ್ಟ್ ಪ್ರಾಕ್ಟೀಸಸ್ ಆ್ಯಕ್ಟ್ ಮತ್ತು ಕೆನಡಾದ ಕರಪ್ಷನ್ ಆಫ್ ಫಾರಿನ್ ಪಬ್ಲಿಕ್ ಆಫೀಸರ್ಸ್ ಆಕ್ಟ್ ಸೇರಿವೆ. ಕೆಲವು ಲಂಚ-ವಿರೋಧಿ ಕಾನೂನುಗಳು ಖಾಸಗಿ ವಲಯದ ವ್ಯಕ್ತಿಗಳಿಗೆ, ಉದಾಹರಣೆಗೆ ಗ್ರಾಹಕ ಮತ್ತು ಪೂರೈಕೆದಾರರಿಗೆ ಅಸಮರ್ಪಕ ಪಾವತಿಗಳನ್ನು ಮತ್ತು ಇತರ ರೀತಿಯ ವಾಣಿಜ್ಯ ಲಂಚಗುಳಿತನವನ್ನು ನಿಷೇಧಿಸುತ್ತವೆ. ಮ್ಯಾಗ್ನದ ಕಾರ್ಯಾಚರಣೆ ಪ್ರಪಂಚದಾದ್ಯಂತ ವಿಸ್ತಾರಿಸಿರುವುದರಿಂದ ಅಂತರಾಷ್ಟ್ರೀಯ ಮತ್ತು ಸ್ಥಳೀಯ ಅವಶ್ಯಕತೆಗಳಿಂದ ಉಂಟಾದ ಎಲ್ಲಾ ಸಮಸ್ಯೆಗಳಿಗು ಈ ನೀತಿಯು ಪರಿಹಾರ ಸೂಚಿಸಲು ಸಾಧ್ಯವಿಲ್ಲ. ಅನ್ವಯಿಸುವ ಅಂತಾರಾಷ್ಟ್ರೀಯ ಮತ್ತು ಸ್ಥಳೀಯ ಕಾನೂನುಗಳನ್ನು ಅರ್ಥಮಾಡಿಕೊಳ್ಳುವುದು ಮತ್ತು ಅನುಸರಿಸುವುದು ಪ್ರತಿಯೊಬ್ಬ ಮ್ಯಾಗ್ನ ಉದ್ಯೋಗಿಯ ಜವಾಬ್ದಾರಿಯಾಗಿದೆ. ನಿರ್ದಿಷ್ಟ ನಡವಳಿಕೆ ಕಾನೂನುಬಾಹಿರವಾಗಿದೆಯೇ ಅಥವಾ ಮ್ಯಾಗ್ನದ ಖ್ಯಾತಿಗೆ ಹಾನಿಕರವಾಗಿದೆಯೇ ಎಂದು ನಿಮಗೆ ಖಚಿತವಿಲ್ಲದಿದ್ದರೆ, ನೀವು ಮ್ಯಾನೇಜ್ಮೆಂಟ್ ಅನ್ನು ಅಥವಾ ನಿಮ್ಮ ಪ್ರಾದೇಶಿಕ ಅಥವಾ ಗುಂಪು ಕಾನೂನು ಸಲಹೆಗಾರ ಅಥವಾ ಪ್ರಾದೇಶಿಕ ಅನುಸರಣೆ ಅಧಿಕಾರಿ ಅವರನ್ನು ಸಂಪರ್ಕ ಮಾಡಬೇಕು.

## ಅನುಕೂಲ ಮಾಡಿಕೊಟ್ಟ ಪಾವತಿ

ಮ್ಯಾಗ್ನ ವ್ಯವಹಾರ ನಡೆಸುವ ಹಲವು ದೇಶಗಳಲ್ಲಿ ಅನುಕೂಲ ಮಾಡಿಕೊಟ್ಟ ಪಾವತಿಗಳು ಕಾನೂನುಬಾಹಿರ ಆಗಿರುವುದರಿಂದ ಅದನ್ನು ನಿಷೇಧಿಸುತ್ತದೆ.

## ಮೂರನೇ ವ್ಯಕ್ತಿಗಳು: ಏಜೆಂಟ್, ಗುತ್ತಿಗೆದಾರ ಮತ್ತು ಇತರ ಮಧ್ಯವರ್ತಿಗಳು

ಲಂಚ-ವಿರೋಧಿ ಕಾನೂನುಗಳು ಮ್ಯಾಗ್ನದ ಅಥವಾ ಮ್ಯಾಗ್ನದ ಪರವಾಗಿ ಕಾರ್ಯನಿರ್ವಹಿಸುವ ಮೂರನೇ ವ್ಯಕ್ತಿ ಮಾಡಿದ ಕಾರ್ಯಗಳು ಬೇರೆ ಎಂದು ಪರಿಗಣಿಸುವುದಿಲ್ಲ. ಆ ಕಾರಣಕ್ಕಾಗಿ, ಏಜೆಂಟ್, ಗುತ್ತಿಗೆದಾರ ಅಥವಾ ಇತರ ಮಧ್ಯವರ್ತಿಗಳಂತಹ ಮೂರನೇ ವ್ಯಕ್ತಿಗಳ ಮೂಲಕ ನೀಡಲಾದ ಅಥವಾ ಮಾಡಲಾದ ಅಸಮರ್ಪಕ ಪಾವತಿಗಳನ್ನು ಮ್ಯಾಗ್ನ ನಿಷೇಧಿಸುತ್ತದೆ. ಮ್ಯಾಗ್ನದ ಪರವಾಗಿ ಕಾರ್ಯನಿರ್ವಹಿಸುವ ಯಾವುದೇ ಮೂರನೇ ವ್ಯಕ್ತಿ ಪೂರೈಕೆದಾರ ನೀತಿ ಸಂಹಿತೆಸೇರಿದಂತೆ ಮ್ಯಾಗ್ನದ ವ್ಯಾಪಾರ ನಡಾವಳಿ ಮಾನದಂಡಗಳನ್ನು ಅನ್ವಯಿಸುತ್ತಿದ್ದಾರೆ ಎಂಬುದನ್ನು ನೀವು ಖಚಿತಪಡಿಸಿಕೊಳ್ಳಬೇಕು. ಏಜೆಂಟ್, ಗುತ್ತಿಗೆದಾರ ಅಥವಾ ಇತರ ಮಧ್ಯವರ್ತಿಗಳನ್ನು ಮ್ಯಾಗ್ನ ಉಳಿಸಿಕೊಂಡ ಎಲ್ಲಾ ಸಂದರ್ಭಗಳಲ್ಲಿ, ನೀವು ಮಾಡಬೇಕಾದದ್ದು ಈ ಕೆಳಗಿನಂತೆ:

- ಮೂರನೇ ವ್ಯಕ್ತಿಯ ಪ್ರಾಮಾಣಿಕತೆ ಮೇಲೆ ವಿಶ್ವಾಸ ಹೊಂದಲು ಸೂಕ್ತ ದಾಖಲಿತ ಆಧಾರವನ್ನು ಹೊಂದುವುದು (ಅಂದರೆ ಸೂಕ್ತವಾದ ಯಥಾಕ್ಷಮತೆ);
- ದುಷ್ಕೃತ್ಯದ ಮೇಲೆ ಕಣ್ಣಿಡಲು ಮತ್ತು ತಡೆಗಟ್ಟಲು ಸಮಂಜಸವಾದ ಕ್ರಮಗಳನ್ನು ತೆಗೆದುಕೊಳ್ಳಿ; ಮತ್ತು
- ಸಂಭವಿಸಬಹುದಾದ ದುಷ್ಕೃತ್ಯದ ಸೂಚನೆಗಳಿಗೆ ಸೂಕ್ತ ರೀತಿಯಲ್ಲಿ ಪ್ರತಿಕ್ರಿಯಿಸಿ.

ಮ್ಯಾಗ್ನ ಪರವಾಗಿ ಸರ್ಕಾರಿ ಅಧಿಕಾರಿಯೊಂದಿಗೆ ಮಾತುಕತೆ ಮಾಡಲು ನೀವು ಮಧ್ಯವರ್ತಿಯನ್ನು ಉಳಿಸಿಕೊಂಡರೆ, ನೀವು ಮೂರನೇ ವ್ಯಕ್ತಿಯ ಸರ್ಕಾರಿ ಮಧ್ಯವರ್ತಿಗಳ ಅನುಸರಣೆ ನಿಯಂತ್ರಣ ಕಾರ್ಯವಿಧಾನಕ್ಕೆ ಅನುಗುಣವಾಗಿ ಸೂಕ್ತವಾದ ಯಥಾಕ್ಷಮತೆ ಮತ್ತು ಪೂರ್ವ-ಅನುಮೋದನೆ ಪಡೆಯಬೇಕು.

ಮಧ್ಯವರ್ತಿಯನ್ನು ನೇಮಿಸಿಕೊಳ್ಳುವ ಅಥವಾ ಮಧ್ಯವರ್ತಿಯೊಂದಿಗೆ ಚಾಲ್ತಿಯಲ್ಲಿರುವ ಒಪ್ಪಂದವನ್ನು ನವೀಕರಿಸುವ ಕುರಿತು ನಿಮಲ್ಲಿ ಯಾವುದೇ ಪ್ರಶ್ನೆಗಳು ಇದ್ದರೆ ನಿಮ್ಮ ಪ್ರಾದೇಶಿಕ ಅಥವಾ ಗುಂಪು ಕಾನೂನು ಸಲಹೆಗಾರ ಅಥವಾ ಪ್ರಾದೇಶಿಕ ಅನುಸರಣೆ ಅಧಿಕಾರಿ ಅವರನ್ನು ಸಂಪರ್ಕಿಸಿ. ಮೂರನೇ ವ್ಯಕ್ತಿಯೊಂದಿಗಿನ ಸಂಬಂಧವನ್ನು ಅಪಾಯಕಾರಿ ಅಥವಾ "ಸರಿಯಾದುದಲ್ಲ" ಎಂದು ಸೂಚಿಸುವ ಎಚ್ಚರಿಕೆಗಳನ್ನು ಪರಿಶೀಲಿಸಿ ಮತ್ತು ಅಂತಹ ಎಚ್ಚರಿಕೆಗಳನ್ನು ಎಂದಿಗೂ ನಿರ್ಲಕ್ಷಿಸಬೇಡಿ. ಇವು ಯಾವ ರೀತಿಯ ಸಂದರ್ಭಗಳನ್ನು ಒಳಗೊಂಡಿರಬಹುದು ಎಂದರೆ, ಅದರಲ್ಲಿ ಮೂರನೇ ವ್ಯಕ್ತಿಯು:

- ಅನರ್ಹನಾಗಿ ಅಥವಾ ಕಡಿಮೆ ಸಿಬ್ಬಂದಿಗಳನ್ನು ಹೊಂದಿರುವಂತೆ ಕಂಡಾಗ;
- ಸರ್ಕಾರಿ ಅಧಿಕಾರಿಯು ನಿರ್ದಿಷ್ಟಪಡಿಸಿದವರು ಅಥವಾ ಶಿಫಾರಸು ಮಾಡಿದವರು ಆಗಿರುವಾಗ;
- ಅವರ ಗುರುತನ್ನು ಗುಟ್ಟಾಗಿಡಲು ವಿನಂತಿಸಿದಾಗ;
- ನಗದಿನ ಸ್ವರೂಪದಲ್ಲಿ ಅಥವಾ ಮುಂಗಡವಾಗಿ ಅಥವಾ ವಿದೇಶಿ ಖಾತೆಗಳಿಂದ ಪಾವತಿಯನ್ನು ಕೇಳಿದಾಗ;
- ಸೇವೆಯನ್ನು ಒದಗಿಸದ ದೇಶದಲ್ಲಿ ಪಾವತಿ ಮಾಡಲು ವಿನಂತಿಸಿಕೊಂಡಾಗ;
- ದಾಖಲೆಗಳನ್ನು ತಪ್ಪಾಗಿ ತಿದ್ದಲು ವಿನಂತಿಸಿದಾಗ;
- ಒದಗಿಸಿದ ಸೇವೆಗಳಿಗೆ ಸಂಬಂಧಿಸಿದಂತೆ ಅಥವಾ ಅವರ ಪ್ರತಿಸ್ಪರ್ಧಿಗಳೊಂದಿಗೆ ಹೋಲಿಸಿದಾಗ ಅತ್ಯಂತ ದೊಡ್ಡ ಪ್ರಮಾಣದಲ್ಲಿ ಹಣವನ್ನು ವಿನಂತಿಸಿದಾಗ
- ಅತ್ಯಂತ ಹೆಚ್ಚಿನ ಅಥವಾ ದಾಖಲೆ ಇಲ್ಲದ ವೆಚ್ಚಗಳಿಗೆ ಮರುಪಾವತಿಯನ್ನು ಬೇಡಿಕೆ ಇಟ್ಟಾಗ; ಅಥವಾ
- ಲಂಚದ ತೊಂದರೆಯಂತೆ ತೋರುವ ಯಾವುದೇ ಇತರ ನಡಾವಳಿಗಳಿದಾಗ.

ಈ ರೀತಿಯ ಯಾವುದೇ " ಸರಿಯಾದುದಲ್ಲದ್ದು" ಕಂಡುಬಂದರೆ, ಪ್ರಾದೇಶಿಕ ಅಥವಾ ಗುಂಪು ಕಾನೂನು ಸಲಹೆಗಾರ ಅಥವಾ ಪ್ರಾದೇಶಿಕ ಅನುಸರಣೆ ಅಧಿಕಾರಿ ಅವರು ಹೆಚ್ಚುವರಿ ತನಿಖೆ ಮತ್ತು ಪರಿಶೀಲನೆಯನ್ನು ಅಗತ್ಯವಾಗಿ ಮಾಡಬೇಕು.

## ಉಲ್ಲಂಘನೆಗಳು

ಈ ಪಾಲಿಸಿಯ ಯಾವುದೇ ಉಲ್ಲಂಘನೆಯನ್ನು ಗಂಭೀರ ವಿಷಯವೆಂದು ಪರಿಗಣಿಸಲಾಗುತ್ತದೆ ಮತ್ತು ಉದ್ಯೋಗದಿಂದ ತೆಗೆಯುವುದು ಸೇರಿದಂತೆ ಶಿಸ್ತಿನ ಕ್ರಮವನ್ನು ಜರುಗಿದಬಹುದಾಗಿದೆ.

ಯಾರಾದರೂ ಮ್ಯಾಗ್ನದ ನಡಾವಳಿ ಮತ್ತು ನೈತಿಕತೆ ನೀತಿ ಅಥವಾ ಈ ನೀತಿಯನ್ನು ಉಲ್ಲಂಘಿಸುತ್ತಿರುವುದಾಗಿ ನಿಮಗೆ ತಿಳಿದಿದ್ದರೆ ಅಥವಾ ಅನುಮಾನವಿದ್ದರೆ, ನೀವು ನಿಮ್ಮ ಕಳಕಳಿಯನ್ನು ತಕ್ಷಣ (i) ನಿಮ್ಮ ಮ್ಯಾನೇಜರ್, (ii) ವಿಭಾಗೀಯ ಅಥವಾ ಗುಂಪು

ಹಣಕಾಸು ಅಧಿಕಾರಿ, (iii) ಗುಂಪು ಅಥವಾ ಪ್ರಾದೇಶಿಕ ಕಾನೂನು ಸಲಹೆಗಾರ, (iv) ಪ್ರಾದೇಶಿಕ ಅನುಸರಣೆ ಅಧಿಕಾರಿ, (v) ನೈತಿಕತೆ ವಿಪಿ ಮತ್ತು ಮುಖ್ಯ ಅನುಸರಣೆ ಅಧಿಕಾರಿಗಳಿಗೆ, ಅಥವಾ (vi) ಮ್ಯಾಗ್ನ ಹಾಟ್‌ಲೈನ್ ಮೂಲಕ ವರದಿ ಮಾಡಬೇಕು

ಮ್ಯಾಗ್ನದ ಪ್ರತೀಕಾರ-ವಿರೋಧಿಯ ನೀತಿಯಅನುಸಾರವಾಗಿ, ಮ್ಯಾಗ್ನದ ನಡಾವಳಿ ಮತ್ತು ನೈತಿಕತೆ ನೀತಿ ಅಥವಾ ಈ ನೀತಿಯ ಯಾವುದೇ ಉಲ್ಲಂಘನೆಯನ್ನು ಒಳ್ಳೆಯ ಉದ್ದೇಶದಿಂದ ವರದಿ ಮಾಡುವ ಯಾವುದೇ ವ್ಯಕ್ತಿಯ ಮೇಲೆ ಪ್ರತೀಕಾರ ಹೊಂದುವುದನ್ನು ಮ್ಯಾಗ್ನ ನಿಷೇಧಿಸುತ್ತದೆ.

## ಉಪಯುಕ್ತ ಸಲಹೆಗಳು

### *ಯಾವಾಗಲು…*

- ನೀವು ಅನ್ವಯಿಸುವ ಕಾನೂನು ಅವಶ್ಯಕತೆಗಳನ್ನು ಹಾಗೂ ಉಡುಗೊರೆ ಮತ್ತು ಮನರಂಜನೆಯನ್ನು ನೀಡುವ ಅಥವಾ ಸ್ವೀಕರ ಮಾಡುವ ಬಗೆಗಿನ ಮ್ಯಾಗ್ನದ ದೃಷ್ಟಿಕೋನವನ್ನು ಸಂಪೂರ್ಣವಾಗಿ ಅರ್ಥಮಾಡಿಕೊಂಡಿರುವುದನ್ನು ಖಚಿತಪಡಿಸಿಕೊಳ್ಳಿ (ಮ್ಯಾಗ್ನದ ಉಡುಗೊರೆ ಮತ್ತು ಮನರಂಜನೆ ನೀತಿಯನ್ನುಕೂಡ ನೋಡಿ).
- ಮೂರನೇ ವ್ಯಕ್ತಿಗಳನ್ನು (ಲಾಬಿ ಮಾಡುವವರನ್ನು ಒಳಗೊಂಡಂತೆ ಸ್ವತಂತ್ರ ಗುತ್ತಿಗೆದಾರರನ್ನು) ಆಯ್ಕೆ ಮಾಡುವಾಗ ಮತ್ತು ತೊಡಗಿಸಿಕೊಳ್ಳುವಾಗ ಸರಿಯಾದ ಯಥಾಕ್ಷಮತೆ ನಡೆಸಬೇಕು.
- ಮೂರನೇ ವ್ಯಕ್ತಿ ಸರ್ಕಾರಿ ಮಧ್ಯವರ್ತಿಗಳಿಗೆ ಮತ್ತು ಸರ್ಕಾರಿ ಅಧಿಕಾರಿಗಳ ಮೇಲಿನ ಖರ್ಚುಗಳಿಗೆ ಅನುಸರಣೆ ನಿಯಂತ್ರಣ ಕಾರ್ಯವಿಧಾನಗಳು ಅನುಸರಣೆ ಮಾಡಬೇಕು.
- ಔಪಚಾರಿಕ ಒಪ್ಪಂದದ ಮೂಲಕ ಮೂರನೇ ವ್ಯಕ್ತಿಗಳಿಗೆ ನಮ್ಮ ಲಂಚ-ವಿರೋಧಿ ಅವಶ್ಯಕತೆಗಳನ್ನು ತಿಳಿಸಿ, ಅವರ ಒಪ್ಪಂದ ಚಾಲ್ತಿಯಲ್ಲಿ ಇರುವವರೆಗು ಮೂರನೇ ವ್ಯಕ್ತಿಯ ಚಟುವಟಿಕೆಗಳ ಮೇಲ್ವಿಚಾರಣೆ ಮತ್ತು ಲೆಕ್ಕಪರಿಶೋಧನೆ ಮಾಡಲಾಗಿದೆ ಎಂದು ಖಚಿತಪಡಿಸಿಕೊಳ್ಳಬೇಕು.
- ಮ್ಯಾಗ್ನದ ಪೂರೈಕೆದಾರರ ನೀತಿ ಸಂಹಿತೆ ಅನ್ನು ಪೂರೈಕೆದಾರರಿಗೆ ತಿಳಿಸಿ.
- ಸಣ್ಣ ನಗದಿನ ಮೂಲಕ ಪ್ರೊಸೆಸ್ ಮಾಡಿದ ಖರ್ಚುಗಳು ಒಳಗೊಂಡಂತೆ ಎಲ್ಲಾ ಖರ್ಚುಗಳು ನಿಖರವಾಗಿ ದಾಖಲಿಸಲಾಗಿದೆ ಎಂದು ಖಚಿತಪಡಿಸಿಕೊಳ್ಳಬೇಕು.
- ಹಣಕಾಸು ಸಿಬ್ಬಂದಿಗೆ ಮಾಡಿದ ಎಲ್ಲಾ ಪಾವತಿ ವಿನಂತಿಗಳಿಗು ಕಾನೂನುಬದ್ದ ಇನ್‌ವಾಯ್ಸ್‌ಗಳನ್ನು ಒದಗಿಸಲಾಗಿದೆಯೆ, ಅಗತ್ಯವಿರುವ ಉದ್ಯೋಗಿಗಳಿಂದ ಅನ್ವಯವಾಗುವ ಸಹಿ ಪಡೆಯುವ ಮೂಲಕ ಅಧಿಕೃತಗೊಳಿಸಲಾಗಿದೆಯೆ, ಸರಿಯಾದ ಪಾವತಿದಾರರಿಗೆ ಮಾಡಲಾಗಿದೆಯೆ ಹಾಗೂ ಮೂರನೇ ವ್ಯಕ್ತಿಯೊಂದಿಗೆ ಒಪ್ಪಿಕೊಂಡ ಕೆಲಸದ ವ್ಯಾಪ್ತಿಗೆ ಅನುಗುಣವಾಗಿ ಸರಿಯಾದ ವ್ಯಾಪಾರ ಉದ್ದೇಶಕ್ಕೆ ಮಾಡಲಾಗಿದೆಯೆ ಎಂದು ಖಚಿತಪಡಿಸಿಕೊಳ್ಳಬೇಕು. ಯಾವುದೇ ಸಂಶಯಾಸ್ಪದ ಪಾವತಿ ವಿನಂತಿಗಳ ಮೇಲೆ ಸರಿಯಾದ ಯಥಾಕ್ಷಮತೆ ಮತ್ತು ಆಂತರಿಕ ವರದಿಯನ್ನು ನಿರ್ವಹಣೆ ಮಾಡಬೇಕು.

### *ಎಂದಿಗು…*

- ಬೇಕಾದ ಅಥವಾ ಸರಿಯಲ್ಲವೆಂದು ತೋರುವ ಪ್ರಯೋಜನವನ್ನು ಪಡೆಯಲು ಸರ್ಕಾರಿ ಅಧಿಕಾರಿ ಅಥವಾ ಇತರ ವ್ಯಕ್ತಿಗೆ ಹೆಚ್ಚಿಗೆ ಬೆಲೆಬಾಳುವ ಯಾವುದನ್ನಾದರೂ ನೀಡಬಾರದು.
- ಗುಟ್ಟಿನ ಕಮಿಷನ್ ಅಥವಾ ಅಂತಹುದೇ ಭ್ರಷ್ಟ ಪಾವತಿಗಳನ್ನು ಮಾಡಲು ಅನುಮತಿಸಬಾರದು. ಇದು ರಾಜಕೀಯ ಪ್ರಭಾವಿ ವ್ಯಕ್ತಿ, ಕಂಪನಿ ಅಥವಾ ನೀಡಲಾಗುವ ಕಾನೂನುಬದ್ದ ಸೇವೆಗಳಿಗೆ ಅಸಮಾನ ಶುಲ್ಕಗಳನ್ನು ಹೊಂದಿರುವ ಸಂಸ್ಥೆಗಳ ಮೂಲಕ ಮಾಡಲಾದ ಒಳ-ವ್ಯವಸ್ಥೆಗಳನ್ನು ಒಳಗೊಂಡಿರುತ್ತವೆ.
- ಮ್ಯಾಗ್ನ ಸಾಮಾನ್ಯವಾಗಿ ಬಾಧ್ಯತೆ ಹೊಂದಿರದ ಸೇವೆಗಾಗಿ ಯಾವುದೇ ವ್ಯಕ್ತಿಗೆ (ನಗದಿನ ರೂಪದಲ್ಲಿ ಅಥವಾ ಯಾವುದೇ ರೂಪದಲ್ಲಿ) ಅನುಕೂಲ ಮಾಡಿಕೊಟ್ಟ ಪಾವತಿ ಅಥವಾ ಪಾವತಿಯನ್ನು ಮಾಡಬಾರದು. ಅಧಿಕಾವಧಿಗೆ, ಸ್ಥಳೀಯ ರಜಾದಿನಗಳಲ್ಲಿ ಕೆಲಸ ಮಾಡಲು ಸರ್ಕಾರಿ ಅಧಿಕಾರಿಗೆ ಪಾವತಿ ಮಾಡುವುದು, ಅವರ ಸಾಮಾನ್ಯ ಉದ್ಯೋಗ ವ್ಯಾಪ್ತಿಯನ್ನು ಮೀರಿ ಕರ್ತವ್ಯಗಳನ್ನು ಕೈಗೊಳ್ಳಲು ಪಾವತಿ ಮಾಡುವುದು ಉದಾಹರಣೆಗಳಲ್ಲಿ ಸೇರಿವೆ.
- ಅಸಮರ್ಪಕ ಪಾವತಿಯನ್ನು ಮಾಡಲು ಮ್ಯಾಗ್ನದ ಏಜೆಂಟ್ ಅಥವಾ ಪ್ರತಿನಿಧಿ ಸೇರಿದಂತೆ ಬೇರೊಬ್ಬರನ್ನು ಪ್ರೋತ್ಸಾಹಿಸುವುದನ್ನು ಅಥವಾ ಅವರಿಗೆ ದಾರಿ ಸುಗಮವಾಗಿಸುವುದನ್ನು ಏನನ್ನಾದರೂ ಮಾಡಬಾರದು.
- "ಗಣನೆಗೆ ಬಾರದ" ದಾಖಲೆಗಳಿಲ್ಲದ ನಿಧಿಯನ್ನು ಇಡಬಾರದು.
- ಲಂಚ ಅಥವಾ ಕಿಕ್‌ಬ್ಯಾಕ್‌ಗೆ ಬೇಡಿಕೆ ಇಡಬಾರದು ಅಥವಾ ಸ್ವೀಕರಿಸಬಾರದು.
- ಮ್ಯಾಗ್ನದ ನಡಾವಳಿ ಮತ್ತು ನೈತಿಕತೆ ನೀತಿ ಅಥವಾ ಈ ನೀತಿಯ ಅನುಸರಣೆಯನ್ನು ತಪ್ಪಿಸಲು ವೈಯಕ್ತಿಕವಾಗಿ ಪಾವತಿ ಮಾಡಬಾರದು.

## ಎಚ್ಚರಿಕೆ ವಹಿಸಬೇಕಾದದ್ದು...

- ಒದಗಿಸಿದ ಸೇವೆಗಳಿಗೆ ಸರಿಹೊಂದದ ಮೂರನೇ ವ್ಯಕ್ತಿಗೆ ಪಾವತಿಗಾಗಿ ಯಾವುದೇ ವಿನಂತಿಯ ಬಗ್ಗೆ.
- ಧರ್ಮಕ್ಕೆ ಅಥವಾ ಫೌಂಡೇಶನ್ ಅಥವಾ ರಾಜಕೀಯ ಪಕ್ಷವನ್ನು ಒಳಗೊಂಡಂತೆ, ಆದರೆ ಅಷ್ಟಕ್ಕೆ ಸೀಮಿತವಾಗದಂತೆ, ಸಂದೇಹಾಸ್ಪದವಾಗಿ ಕಾಣಿಸುವ ಅಥವಾ ಹೆಸರಿನ್ನು ಹೊಂದಿರುವ ಅಥವಾ ವ್ಯವಹಾರಕ್ಕೆ ಸಂಬಂಧಿಸದ ನ್ಯಾಯವ್ಯಾಪ್ತಿಯಲ್ಲಿ ಪಾವತಿಯ ಬೇಡಿಕೆ ಇಟ್ಟಿರುವ ಯಾವುದೇ ವಿನಂತಿಯ ಬಗ್ಗೆ.
- ಈಗಾಗಲೇ ಇರುವ ಅಥವಾ ಮುಂಬರುವ ಮೂರನೇ ವ್ಯಕ್ತಿಯ ಪ್ರತಿನಿಧಿಗಳು ಅಥವಾ ಇತರ ಮಧ್ಯವರ್ತಿಗಳು ಸರಿಯಾದುದ್ದಲ್ಲ ಎಂದು ಪರಿಗಣಿಸಬಹುದಾದ ಚಟುವಟಿಕೆಗಳನ್ನು ಕೈಗೊಂಡಿರಬಹುದು ಎಂದು ಸೂಚಿಸುವ ಹಿನ್ನೆಲೆ ಮಾಹಿತಿಯ ಬಗ್ಗೆ.
- ಕೋಟ್ ನೀಡುವಾಗ ಅಥವಾ ಟೆಂಡರ್ ಪ್ರಕ್ರಿಯೆಯ ಸಂದರ್ಭದಲ್ಲಿ ಬಿಸಿನೆಸ್ ಉಡುಗೊರೆ ಅಥವಾ ಮನರಂಜನೆಯನ್ನು ನೀಡುವುದು ಅಥವಾ ಸ್ವೀಕರಿಸುವುದರ ಬಗ್ಗೆ.

## ಹೆಚ್ಚಿನ ಮಾಹಿತಿಗಾಗಿ:

ಹೆಚ್ಚಿನ ಮಾಹಿತಿಗಾಗಿ ಅಥವಾ ಸಲಹೆಗಾಗಿ, ದಯವಿಟ್ಟು ನಿಮ್ಮ ಗುಂಪು ಅಥವಾ ಪ್ರಾದೇಶಿಕ ಕಾನೂನು ಸಲಹೆಗಾರ, ಪ್ರಾದೇಶಿಕ ಅನುಸರಣೆ ಅಧಿಕಾರಿ ಅಥವಾ Magnaದ ನೈತಿಕತೆ ಉಪಾಧ್ಯಕ್ಷರು ಮತ್ತು ಮುಖ್ಯ ಅನುಸರಣೆ ಅಧಿಕಾರಿಗಳನ್ನು ಸಂಪರ್ಕಿಸಿ.

---

| | |
|---|---|
| Issued: | June 1, 2014 |
| Revised: | June 16, 2021 |
| Next Review: | Q2 2024 |
| Issued By: | Ethics & Legal Compliance |
| Approved By: | Magna Compliance Council |